# ಹಣಕಾಸಿನ ಬಗ್ಗೆ ಅರಿವು ಮೂಡಿಸುವ ಸಂದೇಶಗಳು

## ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ವಿಭಾಗ

ಕೇಂದ್ರೀಯ ಕಚೇರಿ, ಭಾರತೀಯ ರಿಜರ್ವ್ ಬ್ಯಾಂಕ್

# Financial Awareness Messages (FAME)

## FIDD, Central Office



**ಹೊಣೆ ನಿರಾಕರಣೆ**

ಓದುಗರನ್ನು ಹಣಕಾಸು ಸಾಕ್ಷರರನ್ನಾಗಿ ಮಾಡುವ ಕಳಕಳಿಯಿಂದ, ಓದುವ ಮತ್ತು ಕಲಿಸುವ ಸಾಧನವೆಂದು ಮಾತ್ರ ಈ ಪುಸ್ತಕವನ್ನು ನೀಡಲಾಗಿದೆಯಲ್ಲದೆ ಯಾವುದೇ ಹಣಕಾಸಿನ ಉತ್ಪನ್ನ/ಗಳ ಅಥವಾ ಸೇವೆಯ/ಗಳ ಪರವಾಗಿ ಓದುಗರನ್ನು ಪ್ರಭಾವಿಸುವುದಕ್ಕಲ್ಲ.

**ಹಕ್ಕುಸ್ವಾಮ್ಯ**

ಮೂಲವನ್ನು ಉಲ್ಲೇಖಿಸಿ ಮರುಪ್ರಕಟಣೆ ಮಾಡಬಹುದು.

ಎರಡನೆಯ ಆವೃತ್ತಿ - ನವೆಂಬರ್ 2016

ಮುದ್ರಣ- ಭಾರತೀಯ ರಿಜರ್ವ್ ಬ್ಯಾಂಕ್

ಭಾರತೀಯ ರಿಜರ್ವ್ ಬ್ಯಾಂಕ್

ಭಾರತದ ಕೇಂದ್ರೀಯ ಬ್ಯಾಂಕ್

**ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ವಿಭಾಗ**

10ನೇ ಮಹಡಿ, ಶಹೀದ್ ಭಗತ್ ಸಿಂಗ್ ಮಾರ್ಗ

ಕೋಟೆ, ಮುಂಬಯಿ– 400 001

# ವಿಷಯ

ಪುಟ ಸಂ.


| | | |
|---|---|---|
| 1 | ಬ್ಯಾಂಕಿನಲ್ಲಿ ಖಾತೆ ತೆರೆಯುವಾಗ ಸಲ್ಲಿಸಬೇಕಾದ ದಾಖಲೆಗಳು (KYC) | 2 |
| 2 | ಬಜೆಟ್ ಮತ್ತು ಉಳಿತಾಯ ಮತ್ತು ಜವಾಬ್ದಾರಿಯುತವಾಗಿ ಸಾಲ ತೆಗೆದುಕೊಳ್ಳುವುದರ ಮಹತ್ವ | 3 |
| 3 | ನಿಮ್ಮ ಠೇವಣಿ ಮತ್ತು ಠೇವಣಿ ಖಾತೆಯ ಬಗ್ಗೆ ಹೆಚ್ಚು ತಿಳಿಯಿರಿ | 4 |
| 4 | ಸಮಯಕ್ಕೆ ಸರಿಯಾಗಿ ಸಾಲ ಮರುಪಾವತಿ ಮಾಡುವ ಮೂಲಕ ಒಳ್ಳೆಯ ಕ್ರೆಡಿಟ್ ಸ್ಕೋರ್ ನ್ನು ಹೊಂದಿರಿ | 5 |
| 5 | ಡಿ ಡಿ ಮತ್ತು ಚೆಕ್ಕುಗಳನ್ನುತ್ಯಜಿಸಿ ಹಣವನ್ನು ವಿದ್ಯುನ್ಮಾನ ಮಾಧ್ಯಮಗಳ ಮೂಲಕ ರವಾನೆ ಸ್ವೀಕಾರ ಮಾಡಿ | 6 |
| 6 | ನಿಮ್ಮ ಬಾಗಿಲಿಗೆ ಅಥವಾ ನಿಮ್ಮ ಪಕ್ಕದಲ್ಲಿ ಬ್ಯಾಂಕಿಂಗ್ | 7 |
| 7 | ಬ್ಯಾಂಕಿಗೆ ಮತ್ತು ಬ್ಯಾಂಕಿಂಗ್ ಲೋಕಪಾಲರಿಗೆಹೇಗೆ ದೂರು ಸಲ್ಲಿಸುವುದು? | 8 |
| 8 | ಸುಮ್ಮನೆ ಯಾರೂದಾನ ಮಾಡುವುದಿಲ್ಲ! ವಂಚಕರಿಂದ ಮೋಸಹೋಗಬೇಡಿ! | 9 |
| 9 | ಎಟಿಎಮ್ ಗಳಲ್ಲಿ ತೊಂದರೆಯಿಲ್ಲದೆ ವ್ಯವಹರಿಸುವುದಕ್ಕಾಗಿ ಈ ಕೆಳಗಿನ ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಿ | 10 |
| 10 | ನೀವು ಕಷ್ಟಪಟ್ಟು ಗಳಿಸಿದ ಹಣವನ್ನು ನೋಂದಾಯಿತ ಸಂಸ್ಥೆಗಳಲ್ಲಿಯೇ ಹೂಡಿರಿ | 11 |
| 11 | ಬಲವಂತದ ಮಾರಾಟ – ಹಣ ಕಟ್ಟಲೆಂದು ಬ್ಯಾಂಕಿಗೆ ಹೋದಾಗ, ನಿಮಗರ್ಥವಾಗದಿರುವ ವಿಮಾ ಪಾಲಿಸಿಯನ್ನು ಮಾರಿದರೆ, ಅದು ತಪ್ಪು | 12 |




# ಕಲಿಕೆ 1

## ಬ್ಯಾಂಕಿನಲ್ಲಿ ಖಾತೆ ತೆರೆಯುವಾಗ ಸಲ್ಲಿಸಬೇಕಾದ ದಾಖಲೆಗಳು (KYC)

- ಬ್ಯಾಂಕಿನಲ್ಲಿ ಖಾತೆ ತೆರೆಯಲು ನಿಮ್ಮನ್ನು ಗುರುತಿಸುವ ಒಂದು ದಾಖಲೆ, ನಿಮ್ಮ ವಿಳಾಸವನ್ನು ದೃಢೀಕರಿಸುವ ಒಂದು ದಾಖಲೆಯ ಜೊತೆ ನಿಮ್ಮ ಇತ್ತೀಚಿನ ಒಂದು ಭಾವಚಿತ್ರ ಇದ್ದರೆ ಆಯಿತು.

- ನಿಮ್ಮ ಆಧಾರ್ ಕಾರ್ಡ್, ಡ್ರೈವಿಂಗ್ ಲೈಸೆನ್ಸ್, ಮತದಾರ ಚೀಟಿ, ಪಾಸ್ ಪೋರ್ಟ್ ಅಥವಾ ನರೇಗಾ(NREGA) ಕಾರ್ಡುಗಳನ್ನು ನಿಮ್ಮ ಗುರುತು ಹಾಗೂ ವಿಳಾಸ- ಈ ಎರಡಕ್ಕೂ ದಾಖಲೆಯಾಗಿ ಉಪಯೋಗಿಸಬಹುದು. ಆದರೆ ಪಾನ್(PAN) ಕಾರ್ಡು ಬರೀ ಗುರುತಿಗೆ ಮಾತ್ರ ದಾಖಲೆಯಾಗಬಲ್ಲದು.




- ಬ್ಯಾಂಕಿಗೆ ಕೊಟ್ಟಂತಹ ನಿಮ್ಮ ಮನೆಯ ವಿಳಾಸ ಬದಲಾಗಿದ್ದರೆ, ಅವರಿಗೆ ಹೊಸ ವಿಳಾಸವನ್ನು ತಿಳಿಸಿ ಒಂದು ಪತ್ರ ಬರೆದರೆ ಸಾಕು.
- ನಿಮ್ಮ ಗುರುತಿನ ಅಥವಾ ವಿಳಾಸದ ದಾಖಲೆಯಿಲ್ಲದೆಯೂ ಉಳಿತಾಯದ “ಸಣ್ಣ ಖಾತೆ” ಯನ್ನು ನಿಮ್ಮ ಇತ್ತೀಚಿನ ಭಾವಚಿತ್ರ ಹಾಗೂ ನಿಮ್ಮ ಸಹಿಯ ಆಧಾರದ ಮೇಲೆ ತೆರೆಯಬಹುದು. ಇಂಥ ಖಾತೆಯಲ್ಲಿ ₹ 50,000 ಗಳ ವರೆಗೆ ಮೊತ್ತ, ತಿಂಗಳಿಗೆ ₹ 10,000 ಗಳ ವರೆಗೆ ಹಿಂಪಡೆತ ಹಾಗೂ ಒಂದು ಹಣಕಾಸು ವರ್ಷದಲ್ಲಿ ಒಟ್ಟು ₹ 1 ಲಕ್ಷ ಗಳಿಗೆ ಮೀರದಂತೆ ಜಮೆ ಮಾಡಬಹುದು.










# ಕಲಿಕೆ 2

## ಬಜೆಟ್ ಮತ್ತು ಉಳಿತಾಯ ಮತ್ತು ಜವಾಬ್ದಾರಿಯುತವಾಗಿ ಸಾಲ ತೆಗೆದುಕೊಳ್ಳುವುದರ ಮಹತ್ವ




**ಬಜೆಟ್ ಮತ್ತು ಉಳಿತಾಯ**: ಬಜೆಟ್ ಎಂದರೆ, ನೀವು ಭವಿಷ್ಯದಲ್ಲಿ ಗಳಿಸುವ ಮತ್ತು ಖರ್ಚು ಮಾಡುವ ಹಣದ ಬಗ್ಗೆ ಮಾಡುವ ಯೋಜನೆ. ಇದನ್ನು ನೀವು ಖರ್ಚುವೆಚ್ಚಕ್ಕಾಗಲೀ ಅಥವಾ ಉಳಿತಾಯಕ್ಕಾಗಲೀ ಒಂದು ಮಾರ್ಗದರ್ಶಕವಾಗಿ ಉಪಯೋಗಿಸಬಹುದು. ಪ್ರತಿ ಕುಟುಂಬವೂ ತನ್ನ ಆದಾಯ ಮತ್ತು ವೆಚ್ಚಗಳ ಒಂದು ಬಜೆಟ್ ಮಾಡಿ ಅದರಂತೆ ಕಟ್ಟುನಿಟ್ಟಾಗಿ ನಡೆಯಬೇಕು. ತಿಂಗಳಿನ ಬಜೆಟ್ ಮಾಡಿ ಅದರಂತೆ ಖರ್ಚುಗಳನ್ನು ಮಾಡಿದರೆ ಇನ್ನೂ ಒಳ್ಳೆಯದು. ಖರ್ಚನ್ನು ಕಳೆದು ಮಿಕ್ಕ ಆದಾಯವನ್ನು ಉಳಿತಾಯ ಎನ್ನುತ್ತೇವೆ. ಈ ಉಳಿತಾಯವನ್ನು, ಭವಿಷ್ಯದ ಅನಿರೀಕ್ಷಿತ ಘಟನೆಗಳಿಗೆ (ಅಪಘಾತ, ನೈಸರ್ಗಿಕ ಪ್ರಕೋಪ, ಕೆಲಸ ಕಳೆದುಕೊಳ್ಳುವುದು ಇತ್ಯಾದಿ) ಮತ್ತು ಮದುವೆ, ಮಕ್ಕಳ ವಿದ್ಯಾಭ್ಯಾಸ, ಪ್ರವಾಸ, ವಾಹನ ಖರೀದಿ ಮೊದಲಾದ ಜೀವನದ ಇತರೆ ಮಹತ್ವದ ಆಗುಹೋಗುಗಳಿಗೆ ಉಪಯೋಗವಾಗುವಂತೆ ಹೂಡಿಕೆ ಮಾಡಬೇಕು.ನಮಗೆ ದುಡಿಯುವ ಶಕ್ತಿ ಇಲ್ಲದಾಗಲಂತೂ, ಉದಾ: ನಿವೃತ್ತಿಯ ನಂತರ, ಉಳಿತಾಯದಿಂದ ತುಂಬಾ ಅನುಕೂಲವಾಗುತ್ತದೆ.



- **ಉಳಿತಾಯದ ಮಹತ್ವ:** ನಮ್ಮ ಆದಾಯದ ಕೆಲ ಭಾಗವನ್ನು ಖರ್ಚು ಪ್ರಾರಂಭಿಸುವ ಮುನ್ನವೇ ತೆಗೆದಿಡಬೇಕು. ಮೊತ್ತಮೊದಲಿಗೆ, ನಿಮ್ಮ ಉಳಿತಾಯವನ್ನು, ಸುರಕ್ಷಿತವಾಗಿರುವ ಸಂಸ್ಥೆಗಳಲ್ಲಿ, ಸೂಕ್ತ ಹೂಡಿಕೆಗಳಲ್ಲಿಡಬೇಕು. ನೀವೇ ಕಷ್ಟ ಪಟ್ಟು ಗಳಿಸಿದ ಹಣವನ್ನು, ಕಳೆದುಕೊಳ್ಳುವ ಸಂಭವನೀಯತೆ ಇರುವ ( risky) / ಮೇಲ್ವಿಚಾರಣೆಯಿಲ್ಲದ ಸಂಸ್ಥೆಗಳಲ್ಲಿ ಹೂಡಿಕೆ ಮಾಡಿದರೆ, ಅಸಲಿಗೇ ಮೋಸವಾಗಬಹುದು. ಹೀಗಾಗಿ, ಸುರಕ್ಷಿತ ಸ್ಥಳಗಳಲ್ಲಿ ಹೂಡಿಕೆ ಮಾಡುವುದು ಅತೀ ಮುಖ್ಯ. ಎರಡನೆಯದಾಗಿ, ಹಣವನ್ನು ಉಳಿಸುವುದು, ಭವಿಷ್ಯದಲ್ಲಿ ಮಾಡಬೇಕಾಗುವ ಯೋಜಿತ ಅಥವಾ ಅಕಸ್ಮಾತ್/ದಿಢೀರ್ ಖರ್ಚುಗಳಿಗೋಸ್ಕರ. ಹೀಗಾಗಿಯೂ, ನಮಗೆ ಅವಶ್ಯಕತೆಯಿದ್ದಾಗ ಹಿಂಪಡೆಯಬೇಕೆಂದರೆ, ಹಣವನ್ನು ಗೊತ್ತಿರುವಂಥ, ಸುರಕ್ಷಿತ ಸಂಸ್ಥೆಗಳಲ್ಲಿಯೇ ಇಡಬೇಕು.ಮೂರನೆಯದಾಗಿ, ಹಣದುಬ್ಬರದಿಂದ ರಕ್ಷಣೆ ಪಡೆಯಲು, ನಿಮ್ಮ ಹಣದ ಮೇಲೆ ಸ್ವಲ್ಪವಾದರೂ ಆದಾಯವಿರಬೇಕು.


- **ಸಾಲ:** ಮೌಲ್ಯ ಹೆಚ್ಚಾಗುವಂತಹ ಆಸ್ತಿಗಳಲ್ಲಿ ಹೂಡಿಕೆ ಮಾಡಬೇಕೆ ವಿನ: ದೈನಂದಿನ ಖರ್ಚುಗಳನ್ನು ಸರಿತೂಗಿಸಲು ಸಾಲ ಮಾಡಬಾರದು. ಒಳ್ಳೆಯ ಸಾಲದ ಉದಾಹರಣೆಗಳೆಂದರೆ, ಮನೆ ಕೊಳ್ಳಲು ಅಡಮಾನ ಸಾಲ ಮತ್ತು ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸಕ್ಕೆ ತೆಗೆದುಕೊಳ್ಳುವ ಶೈಕ್ಷಣಿಕ ಸಾಲ.

- **ಬ್ಯಾಂಕು Vs ಲೇವಾದೇವಿಗಾರ:**ಬ್ಯಾಂಕು ಭಾರತೀಯ ರಿಜರ್ವ ಬ್ಯಾಂಕಿನ ನಿಯಂತ್ರಣದಲ್ಲಿರುವುದರಿಂದ, ಯಾವತ್ತೂ ಲೇವಾದೇವಿಗಾರರಿಗಿಂತ ಬ್ಯಾಂಕು ಸುರಕ್ಷಿತ.ಬ್ಯಾಂಕುಗಳ ಕೆಲಸ ಪಾರದರ್ಶಕ ಮತ್ತು ಅವರು ಲೇವಾದೇವಿಗಾರರಂತೆ ಹೆಚ್ಚಿನ ದರದಲ್ಲಿ ಬಡ್ಡಿ ಕೇಳುವುದಿಲ್ಲ. ಅಲ್ಲದೆ, ಬ್ಯಾಂಕುಗಳಲ್ಲಿ ದೂರು ನಿರ್ವಹಣೆಗೆ ಸರಿಯಾದ ನೀತಿ ಮತ್ತು ವ್ಯವಸ್ಥೆಯಿರುತ್ತದೆ



# ಕಲಿಕೆ 3

# ನಿಮ್ಮ ಠೇವಣಿ ಮತ್ತು ಠೇವಣಿ ಖಾತೆಯ ಬಗ್ಗೆ ಹೆಚ್ಚು ತಿಳಿಯಿರಿ



- ನಿಮ್ಮ ಹಣವನ್ನು ಉಳಿತಾಯ ಖಾತೆಯಲ್ಲಿಯೇ ಬಿಟ್ಟುಬಿಡಬೇಡಿ. ಅಲ್ಲಿ ನಿಮಗೆ ಉತ್ತಮ ಆದಾಯ ಸಿಕ್ಕುವುದಿಲ್ಲ. ನಿಮ್ಮ ಹತ್ತಿರ ದೊಡ್ಡ ಮೊತ್ತದ ಹಣ ಇದ್ದಾಗ ಅದನ್ನು ಸಾವಧಿ ಅಥವಾ ಸ್ಥಿರ ಠೇವಣಿಯಲ್ಲಿ ತೊಡಗಿಸಿ. ನೀವು ನಿಯಮಿತವಾಗಿ ಹಣವನ್ನು ಉಳಿಸಲು ಇಚ್ಛಿಸುವಿರಾದರೆ, ಆವರ್ತ ಠೇವಣಿ ಖಾತೆಯನ್ನು ಪ್ರಾರಂಭಿಸಿ.
- ನಿಮ್ಮ ಬ್ಯಾಂಕ್ ಖಾತೆ ಮತ್ತು ಭದ್ರತಾ ಸುಪರ್ದಿನಲ್ಲಿಟ್ಟ ವಸ್ತುಗಳಿಗೆ ನಿಮ್ಮ ನಂಬಿಕೆಗೆ ಅರ್ಹರಾಗಿರುವ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಿ. ಇದರಿಂದ ನಿಮ್ಮ ಹತ್ತಿರದವರಿಗೆ ಅನುಕೂಲವಾಗುತ್ತದೆ. ಖಾತೆ ತೆರೆಯುವ ಸಮಯದಲ್ಲಿ ನಾಮನಿರ್ದೇಶನದ ಫಾರ್ಮನ್ನು ಭರ್ತಿಮಾಡಿ. (ನೀವಿಲ್ಲದಿದ್ದರೆ), ನಾಮಿನಿ ಇದ್ದರೆ ಶೀಘ್ರವಾಗಿ ಹಕ್ಕು ಕೋರಿಕೆ (claim) ಗಳನ್ನು ಪರಿಹರಿಸಲು ಸಾಧ್ಯವಾಗುವದರಿಂದ, ಕುಟುಂಬದ ಇತರ ಸದಸ್ಯರ ಸಂಕಷ್ಟಗಳು ಕಡಿಮೆಯಾಗಬಹುದು. ಜಂಟಿ ಖಾತೆಗಳಲ್ಲಿ 'Either or survivor', 'Former or survivor', 'Joint account'- ಇಂಥ ಮುಖ್ಯವಾದ ನಿರ್ದೇಶನಗಳನ್ನು ಬ್ಯಾಂಕುಗಳಿಗೆ ಯೋಚಿಸಿ ಕೊಡಿ.
- ಅವಧಿ/ಸ್ಥಿರ ಠೇವಣಿಯಲ್ಲಿರುವ ಹಣದ ಅವಶ್ಯಕತೆ ಇರಬಹುದೆಂದು ಅನಿಸಿಕೆ ಇದ್ದಾಗ, ಹೂಡಿಕೆಯ ಸಮಯದಲ್ಲೇ ಅವಧಿಪೂರ್ವ ಹಿಂಪಡೆಯುವ ಆಯ್ಕೆಯನ್ನು ಮಾಡಿದ್ದೀರಾ ಎಂದು ಖಚಿತ ಪಡಿಸಿಕೊಳ್ಳಿ.





- ಪಿಂಚಣಿದಾರರು ತಮ್ಮ ಈಗಿರುವ ಉಳಿತಾಯ ಖಾತೆಯಲ್ಲಿಯೇ ಪಿಂಚಣಿಯನ್ನು ಸ್ವೀಕರಿಸಬಹುದು. ನಿಮ್ಮ ಪತಿ/ಪತ್ನಿಯ ಜೊತೆ ಜಂಟಿ ಖಾತೆಯನ್ನು ತೆರೆದು ಅದಕ್ಕೆ ನಾಮನಿರ್ದೇಶನವನ್ನು ಮಾಡುವುದು ಅಥವಾ **"either or survivor'** or **'former or survivor'** ನಿರ್ದೇಶನವನ್ನು ಕೊಟ್ಟಿರುವುದು ಸೂಕ್ತ. ನಿಮಗೆ ಬೇಕಾದರೆ, ನಿಮ್ಮ ಪಿಂಚಣಿ ಖಾತೆಯನ್ನು ಬೇರೆ ಶಾಖೆಗೋ ಬೇರೆ ಬ್ಯಾಂಕಿಗೋ ವರ್ಗಾಯಿಸಿಕೊಳ್ಳಬಹುದು.

- ಪಿಂಚಣಿದಾರರು, ತಮ್ಮ ಜೀವಿತದ ಪ್ರಮಾಣಪತ್ರ (Life Certificate)ವನ್ನು ತಮ್ಮ ಬ್ಯಾಂಕಿಗೆ ಪ್ರತಿ ವರ್ಷ ನವಂಬರಿನಲ್ಲಿ ಕೊಡುವುದನ್ನು ಮರೆಯಬಾರದು. ಕಾಗದ ರೂಪದ ಜೀವನ ಪ್ರಮಾಣ ಪತ್ರದ ಬದಲು ಪಿಂಚಣಿದಾರರು ಆಧಾರ್ ಸಂಖ್ಯೆಯನ್ನಾಧರಿಸಿ ಬಯೋಮೆಟ್ರಿಕ್ ದೃಢೀಕರಣ ಮಾಡಿದ "ಜೀವನ್ ಪ್ರಮಾಣ್" ಎನ್ನುವ ಡಿಜಿಟಲ್ ಪ್ರಮಾಣಪತ್ರವನ್ನು ಕೂಡ ಸಲ್ಲಿಸಬಹುದಾಗಿದೆ.



# ಕಲಿಕೆ 4

## ಸಮಯಕ್ಕೆ ಸರಿಯಾಗಿ ಸಾಲ ಮರುಪಾವತಿ ಮಾಡುವ ಮೂಲಕ ಒಳ್ಳೆಯ ಕ್ರೆಡಿಟ್ ಸ್ಕೋರ್ ನ್ನು ಹೊಂದಿರಿ.




➢ ಸರಿಯಾದ ಕಾರಣಕ್ಕೆ ಸಾಲ ಮಾಡಿ. ತೆಗೆದುಕೊಳ್ಳುವ ಸಾಲ ನಿಮ್ಮ ಮರುಪಾವತಿ ಸಾಮರ್ಥ್ಯದ ಮಿತಿಯಲ್ಲಿದೆಯೇ ಎಂದು ಪರಿಶೀಲಿಸಿ.

➢ ಮರುಪಾವತಿಯ ಕಂತುಗಳನ್ನು ಯಾವತ್ತೂ ತಪ್ಪಿಸಬೇಡಿ.

➢ ಬ್ಯಾಂಕಿನವರು ನಿಮಗೆ ಇನ್ನೊಂದು ಸಾಲ ಕೊಡುವ ಮುನ್ನ ನಿಮ್ಮ ಹಿಂದಿನ ಸಾಲಗಳ ವಿವರಗಳನ್ನು ಮತ್ತು ನಿಮ್ಮ ಕ್ರೆಡಿಟ್ ಸ್ಕೋರ್ ನ್ನು ಪರಿಶೀಲಿಸುತ್ತಾರೆ.

➢ ಸಾಲದ ಮರುಪಾವತಿಯಲ್ಲಿ ಹಾಗು ಸಾಲದ ಇತ್ಯರ್ಥದಲ್ಲಿ ವಿಳಂಬವಾದಲ್ಲಿ, ಅದು ಸಾಲದ ಪೂರ್ವಾಪರ/ ಕ್ರೆಡಿಟ್ ಸ್ಕೋರ್ ನ್ನು ಪ್ರತಿಕೂಲವಾಗಿಸುತ್ತದೆ. ವಿಳಂಬವಾಗುವ ಸಾಧ್ಯತೆಯಿದ್ದಲ್ಲಿ ಬ್ಯಾಂಕಿಗೆ ತಿಳಿಸಿ.

➢ ಸಾಲವನ್ನು ಆದಷ್ಟು ಶೀಘ್ರವಾಗಿ ಮರುಪಾವತಿ ಮಾಡುವುದರಿಂದ ನಿಮಗೆ ಒಳ್ಳೆಯ ಕ್ರೆಡಿಟ್ ಇತಿಹಾಸ ಬಂದು ಮುಂದೆ ನಿಮಗೆ ವೈಯಕ್ತಿಕ/ವ್ಯವಹಾರ ಸಾಲ ತೆಗೆದುಕೊಳ್ಳಲು ಸಹಾಯವಾಗುತ್ತದೆ.


➢ ನಿಮ್ಮ ಸಾಲಗಳ ವಿವರಗಳನ್ನು ಮತ್ತು ಇತರ ತಕ್ಕುದಾದ ವಿವರಗಳನ್ನಾಧರಿಸಿ, ನಿಮಗೆ ಕ್ರೆಡಿಟ್ ಸ್ಕೋರ್ ಕೊಡುತ್ತಾರೆ. ಹೆಚ್ಚಿನ ಕ್ರೆಡಿಟ್ ಸ್ಕೋರ್ ಎಂದರೆ ನೀವು ಸಾಲ ಕೊಡಲು ಅಷ್ಟು ಹೆಚ್ಚು ಯೋಗ್ಯ ಮತ್ತು ಜವಾಬ್ದಾರಿಯುತ ವ್ಯಕ್ತಿ ಎಂದರ್ಥ.






## ಕಲಿಕೆ 5


# ಡಿ ಡಿ ಮತ್ತು ಚೆಕ್ಕುಗಳನ್ನು ತ್ಯಜಿಸಿ. ಹಣವನ್ನು ವಿದ್ಯುನ್ಮಾನ ಮಾಧ್ಯಮಗಳ ಮೂಲಕ ರವಾನೆ/ ಸ್ವೀಕಾರ ಮಾಡಿ



- **NEFT-ನೆಫ್ಟ್**

**ದೇಶದಲ್ಲಿ ಎಲ್ಲಾದರೂ ಸರಿ, ಕೆಲವೇ ಗಂಟೆಗಳಲ್ಲಿ ಹಣವನ್ನು ರವಾನೆ ಮಾಡಿ.**

ನೆಫ್ಟ್ -ವಾರದ ಎಲ್ಲಾ ದಿನಗಳಂದು ಮತ್ತು ಕೆಲಸ ಮಾಡುವ ಶನಿವಾರದಂದು ಬೆಳಿಗ್ಗೆ 8:೦೦ ರಿಂದ ಸಾಯಂಕಾಲ 7:೦೦ ವರೆಗೆ



- **RTGS- ಆರ್.ಟಿ.ಜಿ.ಎಸ್**

ನಿಮಗೆ ಎರಡು ಲಕ್ಷಕ್ಕೂ ಮೀರಿದ ಹಣವನ್ನು ತಕ್ಷಣವೇ ರವಾನಿಸಬೇಕಾದರೆ ರಿಯಲ್ ಟೈಮ್ ಗ್ರಾಸ್ ಸೆಟ್ಲ್ ಮೆಂಟ್ (RTGS) ಉಪಯೋಗಿಸಿ.ಗ್ರಾಹಕರಿಗೆ, ಆರ್.ಟಿ.ಜಿ.ಎಸ್ ವಾರದ ಎಲ್ಲಾ ದಿನಗಳಂದು ಮತ್ತು ಕೆಲಸ ಮಾಡುವ ಶನಿವಾರದಂದು ಬೆಳಿಗ್ಗೆ 8.00 ರಿಂದ ಸಾಯಂಕಾಲ 04:30 ವರೆಗೆ ಲಭ್ಯ.

- **IMPS- ಐ.ಎಮ್.ಪಿ.ಎಸ್**

ತಕ್ಷಣವೇ ಹಣ ರವಾನಿಸಲು Immediate Payment Service (IMPS) - ಇಮ್ಮೀಡಿಏಟ್ ಪೇಮೆಂಟ್ ಸಿಸ್ಟಮ್ - ಐ ಎಮ್ ಪಿ ಎಸ್- ನ್ನು ಉಪಯೋಗಿಸಿ. ಬ್ಯಾಂಕ್ ರಜಾದಿನಗಳು ಮತ್ತು ಭಾನುವಾರಗಳಂದು ಕೂಡ 24x7 ಹಣವನ್ನು ಕಳುಹಿಸಬಹುದು.

**ನೆಫ್ಟ್, ಆರ್.ಟಿ.ಜಿ.ಎಸ್ ಮತ್ತು ಐ.ಎಮ್.ಪಿ.ಎಸ್** ಸೇವೆಗಳನ್ನು ಬ್ಯಾಂಕಿನ ಶಾಖೆಗಳಲ್ಲಿ ಅಥವಾ ಇಂಟರ್ ನೆಟ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್ ಇತ್ಯಾದಿ ಆನ್ ಲೈನ್ ಮಾರ್ಗಗಳ ಮೂಲಕವೂ ಉಪಯೋಗಿಸಬಹುದು.

- **UPI (Unified Payment Interface)- ಯುಪಿಐ-ಯುನಿಫೈಡ್ ಪೇಮೆಂಟ್ ಇಂಟರ್ ಫೇಸ್**

ನಿಮ್ಮ/ ನೀವು ಹಣ ವರ್ಗಾವಣೆ ಮಾಡುವ ವ್ಯಕ್ತಿಯ ಬ್ಯಾಂಕಿನ ಖಾತೆಯ/ IFSC/ಎಟಿಎಂ/ಡೆಬಿಟ್ ಕಾರ್ಡ್ ಸಂಖ್ಯೆ ಇತ್ಯಾದಿ ಯಾವುದೇ ವಿವರಗಳನ್ನು ಕೊಡದೆಯೇ, ವರ್ಚುವಲ್ ಪೇಮೆಂಟ್ ಅಡ್ರೆಸ್ ( ವಿಪಿಎ) ಮುಖಾಂತರ ತ್ವರಿತವಾಗಿ ಮತ್ತು ಸುಲಭವಾಗಿ ಹಣ ವರ್ಗಾವಣೆ ಮಾಡಲು ಇರುವ ಒಂದು ವ್ಯವಸ್ಥೆ ಯುಪಿಐ.

ಬ್ಯಾಂಕ್ ರಜಾದಿನಗಳು ಮತ್ತು ಭಾನುವಾರಗಳಂದು ಕೂಡ 24x7 ಹಣವನ್ನು ಕಳುಹಿಸಬಹುದು.

ಯುಪಿಐ ಅನ್ನು ಪಾವತಿಯ ಒಂದು ಆಯ್ಕೆಯಾಗಿ ಇಟ್ಟುಕೊಂಡಿರುವಂಥ ವ್ಯಾಪಾರಿಗಳಿಗೆ ಕೂಡ ನೀವು ಹಣಪಾವತಿಯನ್ನು ಯುಪಿಐ ಮುಖಾಂತರ ಮಾಡಬಹುದು.


ಯುಪಿಐ ಅನ್ನು ಉಪಯೋಗಿಸಲು ಅಪ್ಲಿಕೇಶನ್ ಅನ್ನು ನಿಮ್ಮ ಸ್ಮಾರ್ಟ್ ಫೋನಿಗೆ ಡೌನ್ ಲೋಡ್ ಮಾಡಿಕೊಳ್ಳಬೇಕು.



# ಕಲಿಕೆ 6

## ನಿಮ್ಮ ಬಾಗಿಲಿಗೆ ಅಥವಾ ನಿಮ್ಮ ಪಕ್ಕದಲ್ಲಿ ಬ್ಯಾಂಕಿಂಗ್

- ನಿಮ್ಮ ಬ್ಯಾಂಕಿಂಗ್‌ಕೆಲಸಗಳಿಗೆ ನೀವೇ ಬ್ಯಾಂಕಿಗೆ ಹೋಗಬೇಕಾಗಿಲ್ಲ ಬಿಸಿ - ಬ್ಯಾಂಕಿಂಗ್ ಪ್ರತಿನಿಧಿ(BC/ಬಿ.ಸಿ.) ನಿಮ್ಮ ಬ್ಯಾಂಕು ನೇಮಿಸಿರುವ ಏಜಂಟ್. ನಿಮಗೆ ಹತ್ತಿರದ ಬ್ಯಾಂಕಿನ ಶಾಖೆಗೆ ಹೋಗಿ ನಿಮ್ಮಭಾಗದಲ್ಲಿರುವ ಬಿಸಿ.ಗಳ ಬಗ್ಗೆ ತಿಳಿದುಕೊಳ್ಳಿರಿ ಇದನ್ನು PMJDY ವೆಬ್ ಸೈಟ್ http://pmjdy.gov.in/g-i-s.aspx ನಲ್ಲಿಯೂ ಕಂಡುಕೊಳ್ಳಬಹುದು
- ವ್ಯಕ್ತಿ, ಎನ್.ಜಿ.ಒ, ಸ್ವಸಹಾಯ ಗುಂಪು, ಸಾರ್ವಜನಿಕ ಸಂಸ್ಥೆ, ಅಂಚೆ ಕಚೇರಿ, ಪ್ರಾಥಮಿಕ ವ್ಯವಸಾಯ ಸಹಕಾರಿ ಸಂಸ್ಥೆ, ಕಿರುಬಂಡವಾಳ ಸಂಸ್ಥೆ, ಠೇವಣಿ ಸ್ವೀಕರಿಸುವವುಗಳನ್ನು ಬಿಟ್ಟು ಇತರ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ, ಪೇಮೆಂಟ್ ಬ್ಯಾಂಕ್ ಇಂಥ ಯಾರನ್ನಾದರೂ  ಬಿ.ಸಿ. ಯಾಗಿ ಬ್ಯಾಂಕುಗಳು ನೇಮಿಸಬಹುದು.
- ಲ್ಯಾಪ್ ಟಾಪ್, ಕೈಯಲ್ಲಿ ಹಿಡಿದ ಸಾಧನ ಅಥವಾ ಮೊಬೈಲ್ ಮೂಲಕ ಬಿ.ಸಿ. ಯು ನಿಮ್ಮನ್ನು ಬ್ಯಾಂಕಿನ ಜೊತೆ ಸಂಪರ್ಕ ಮಾಡಿಸುತ್ತಾರೆ.
- ಅನುಮಾನ ವಿದ್ದರೆ, ಬಿ.ಸಿ. ಯ ಹೆಸರು ಮತ್ತು ಇತರ ವಿವರಗಳನ್ನು ನಿಮ್ಮ ಬ್ಯಾಂಕಿನ ಮೂಲಕ ಖಚಿತಪಡಿಸಿಕೊಳ್ಳಿ.
- ಬಿ.ಸಿ. ಯ ಮೂಲಕ ನೀವು ಬ್ಯಾಂಕ್ ಖಾತೆಯನ್ನು ತೆರೆಯಬಹುದು, ಹಣವನ್ನು ಜಮೆ ಮಾಡಬಹುದು ಇಲ್ಲವೆ ಹಿಂಪಡೆಯಬಹುದು, ಸಾಲಕ್ಕೆ ಅರ್ಜಿ ಸಲ್ಲಿಸಬಹುದು, ಕಿರು ಸಾಲ ಪಡೆಯಬಹುದು ಮತ್ತು ಹಣ ರವಾನೆ ಮಾಡಬಹುದು.
- ಬಿ.ಸಿ.ಯ ಸೇವೆಯಿಂದ ನಿಮಗೆ ಅಸಮಾಧಾನವಿದ್ದಲ್ಲಿ ಬ್ಯಾಂಕಿಗೆ ದೂರು ಕೊಡಬಹುದು.



# ಕಲಿಕೆ 7

## ಬ್ಯಾಂಕಿಗೆ ಮತ್ತು ಬ್ಯಾಂಕಿಂಗ್ ಲೋಕಪಾಲರಿಗೆ ಹೇಗೆ ದೂರು ಸಲ್ಲಿಸುವುದು?




- ಬ್ಯಾಂಕಿನ ಶಾಖೆಯಲ್ಲಿರುವ 'ಕಂಪ್ಲೇಂಟ್ ರಿಜಿಸ್ಟರ್'- ಪುಸ್ತಕದಲ್ಲಿ ನಿಮ್ಮ ದೂರನ್ನು ಬರೆಯಿರಿ.ಪುಸ್ತಕ ಸಿಗದಿದ್ದಲ್ಲಿ ಕೇಳಿ ಪಡೆಯಿರಿ. ಆನ್ ಲೈನ್ ನಲ್ಲೂ ದೂರು ಕೊಡಬಹುದು.
- ದೂರನ್ನು ಪರಿಹರಿಸುವ ಅಧಿಕಾರಿಗಳ ಹೆಸರನ್ನು ಬ್ಯಾಂಕಿನಲ್ಲಿ ಬರೆದಿಲ್ಲದಿದ್ದರೆ, ಅದನ್ನೂ ಕೇಳಿ ತಿಳಿಯಿರಿ. ಬ್ಯಾಂಕುಗಳು ದೂರು ಪರಿಹರಿಸಲು ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಿರುತ್ತಾರೆ.




- ನಿಮ್ಮ ದೂರನ್ನು ಇಂತಿಷ್ಟು ಸಮಯದಲ್ಲಿ ತೀರ್ಮಾನ ಮಾಡಬೇಕು. ಇಲ್ಲದಿದ್ದಲ್ಲಿ, ಬ್ಯಾಂಕು ನಿಮಗೆ ಕಾರಣ ಕೊಡಬೇಕು.
- ನಿಮ್ಮ ಬ್ಯಾಂಕು ನಿಮ್ಮ ದೂರನ್ನು ಒಂದು ತಿಂಗಳಲ್ಲಿ ತೀರ್ಮಾನ ಮಾಡದಿದ್ದರೆ, ರಿಜರ್ವ ಬ್ಯಾಂಕಿನ ಬ್ಯಾಂಕಿಂಗ್ ಲೋಕಪಾಲರಿಗೆ ಬರೆಯಬಹುದು. ರಿಜರ್ವ ಬ್ಯಾಂಕಿನ ಬ್ಯಾಂಕಿಂಗ್ ಲೋಕಪಾಲ ಯೋಜನೆಯು ನಿಮ್ಮ ದೂರನ್ನು ಯಾವದೇ ಶುಲ್ಕವಿಲ್ಲದೆ ಪರಿಹರಿಸುತ್ತದೆ.




- ಬ್ಯಾಂಕಿಂಗ್ ಲೋಕಪಾಲರು ರಿಜರ್ವ ಬ್ಯಾಂಕಿನಿಂದ ನೇಮಕವಾಗಿದ್ದು ದೇಶದಲ್ಲಿ ೧೫ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಬ್ಯಾಂಕಿಂಗ್ ಲೋಕಪಾಲರಿಂದ ಬ್ಯಾಂಕಿಂಗ್ ಸೇವೆಯಲ್ಲಿರುವ ಅನೇಕ ತರಹದ ನ್ಯೂನತೆಗಳನ್ನು ಪರಿಹರಿಸಿಕೊಳ್ಳಬಹುದು.
- ನಿಮ್ಮ ದೂರನ್ನು ಬಿಳಿ ಹಾಳೆಯ ಮೇಲೆ ಬರೆದು, ಆನ್ ಲೈನ್ ನಲ್ಲಿ ಅಥವಾ ಈ ಮೇಲ್ ನಲ್ಲಿ ಬರೆಯಬಹುದು. https://bankingombudsman.rbi.org.in ನಲ್ಲಿಯೂ ನಿಮ್ಮ ದೂರನ್ನು ಕೊಡಬಹುದು.







# ಕಲಿಕೆ 8

## ಸುಮ್ಮನೆ ಯಾರೂ ದಾನ ಮಾಡುವುದಿಲ್ಲ!

## ವಂಚಕರಿಂದ ಮೋಸ ಹೋಗಬೇಡಿ!

- ರಿಜರ್ವ್ ಬ್ಯಾಂಕ್/ರಿಜರ್ವ್ ಬ್ಯಾಂಕಿನ ಗವರ್ನರ್/ ನಿಮ್ಮ ಬ್ಯಾಂಕ್ ಅಲ್ಲದೆ ಬೇರೆ ಯಾವುದೇ ಬ್ಯಾಂಕ್ ಹೆಸರಿನಿಂದ ನಿಮಗೆ ಹಣ ಕೊಡುವ ಬಗ್ಗೆ ಈಮೇಲ್, ಎಸ್ಸೆಮ್ಮೆಸ್ ಅಥವಾ ಫೋನ್ ಕರೆಗಳು ಬಂದರೆ, ಅದನ್ನು ನಂಬಬೇಡಿ. ಮೋಸಹೋಗುವಿರಿ.
- ರಿಜರ್ವ್ ಬ್ಯಾಂಕ್ ಅಥವಾ ಇನ್ನಾವುದೇ ಸರಕಾರೀ ಸಂಸ್ಥೆಯ ಹೆಸರಿನಲ್ಲಿ, ದೇಶದಲ್ಲಿಂದ ಅಥವಾ ಬೇರೆಡೆಯಿಂದ ಕಡಿಮೆ ದರದಲ್ಲಿ ಸಾಲ ಸಿಗುವ ಬಗ್ಗೆ ಅಥವಾ ಲಾಟರಿ ಆಮಿಷಗಳಿಗೆ ಅಥವಾ ಮೋಸದ ಈಮೇಲ್ ಗಳಿಗೆ ಬಲಿಯಾಗಬೇಡಿ,
- ಪರಿಚಿತ ಅಥವಾ ಅಪರಿಚಿತ ಸಂಸ್ಥೆಯಿಂದ ದೊಡ್ಡ ಮೊತ್ತದ ಹಣವನ್ನು ಜಮೆ ಮಾಡುವ ಮೊದಲು ಆರಂಭಿಕ ಠೇವಣಿ, ಕಮಿಶನ್ ಅಥವಾ ರವಾನೆ ಫೀ ಎಂದು ಹಣವನ್ನು ಕಳುಹಿಸಬೇಡಿ. ಮೋಸ ಹೋದೀರಿ.





- ರಿಜರ್ವ್ ಬ್ಯಾಂಕು ಯಾವ ವ್ಯಕ್ತಿಯ ಜೊತೆಗೂ ವ್ಯವಹರಿಸುವುದಿಲ್ಲ. ವ್ಯಕ್ತಿಗಳ ಹೆಸರಿನಲ್ಲಿ ಉಳಿತಾಯ ಖಾತೆ/ ಚಾಲ್ತಿ ಖಾತೆ/ ಅವಧಿ ಖಾತೆ ತೆರೆಯುವುದಿಲ್ಲ ಅಥವಾ ಕ್ರೆಡಿಟ್/ಡೆಬಿಟ್ ಕಾರ್ಡುಗಳನ್ನಾಗಲೀ ಕೊಡುವುದಿಲ್ಲ.
- ರಿಜರ್ವ್ ಬ್ಯಾಂಕ್ /ಇತರ ಬ್ಯಾಂಕುಗಳು ನಿಮ್ಮ ಬ್ಯಾಂಕ್ ಖಾತೆಯ/ ಕ್ರೆಡಿಟ್/ಡೆಬಿಟ್ ಕಾರ್ಡುಗಳ ವಿವರಗಳನ್ನು ಈಮೇಲ್ / ಎಸ್ಸೆಮ್ಮೆಸ್/ ಫೋನ್ ಕರೆಗಳ ಮುಖಾಂತರ ಎಂದಿಗೂ ಕೇಳುವುದಿಲ್ಲ. ಇಂಥ ವಿವರಗಳನ್ನು ಯಾರಿಗೂ ಕೊಡಬೇಡಿ.
- ನಿಮ್ಮ ಬ್ಯಾಂಕ್-ಖಾತೆಯ ವಿವರ,ಇಂಟರ್ ನೆಟ್ ಬ್ಯಾಂಕಿಂಗ್ ಬಳಕೆದಾರರ ಐ ಡಿ, ಪಾಸ್ ವರ್ಡ್, ಕ್ರೆಡಿಟ್/ಡೆಬಿಟ್ ಕಾರ್ಡ್ ಸಂಖ್ಯೆ ಸಿವಿವಿ(CVV),ಎಟಿಎಂ ಪಿನ್ ಅಥವಾ OTP ಗಳನ್ನು ಯಾರಿಗೂ ಹೇಳಬೇಡಿ.
- ದೇಶದಲ್ಲಿಂದ ಅಥವಾ ಬೇರೆಡೆಯಿಂದ ಕಡಿಮೆ ದರದಲ್ಲಿ ಹಣ ಸಿಗುವ ಬಗ್ಗೆ ಅಥವಾ ಲಾಟರಿ ಆಮಿಷಗಳ ಮೋಸದ ಕೊಡುಗೆಗಳು ನಿಮಗೆ ಬಂದರೆ ಸ್ಥಳೀಯ ಪೋಲಿಸ್ ಅಥವಾ ಸೈಬರ್ ಕ್ರೈಮ್ ಪ್ರಾಧಿಕಾರಕ್ಕೆ ದೂರು ಕೊಡಿ.




# ಕಲಿಕೆ 9

## ಎಟಿಎಮ್ ಗಳಲ್ಲಿ ತೊಂದರೆಯಿಲ್ಲದೆ ವ್ಯವಹರಿಸುವುದಕ್ಕಾಗಿ ಈ ಕೆಳಗಿನ ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಿ

- ನಿಮ್ಮ ಎಟಿಎಮ್ ನಲ್ಲಿ ನೀವು ಹಣ ಹಿಂಪಡೆಯಬಹುದು ರವಾನೆ ಮಾಡಬಹುದು ಖಾತೆಯಲ್ಲಿರುವ ಶಿಲ್ಕನ್ನು ನೋಡಿಕೊಳ್ಳಬಹುದು ಮೊಬೈಲ್ ಬ್ಯಾಂಕಿಂಗ್ ಗೆ ರಿಜಿಸ್ಟರ್ ಮಾಡಿಕೊಳ್ಳಬಹುದು ಬಿಲ್ಲು ಪಾವತಿಸಬಹುದು ಮತ್ತು ಬ್ಯಾಂಕ್ ಖಾತೆಗೆ ಆಧಾರ್ ಸಂಪರ್ಕ ಕೊಡಬಹುದು
- ನಿಮ್ಮ ಎಟಿಎಮ್ ಕಾರ್ಡಿನ ವಿವರಗಳನ್ನು ಮತ್ತು ಪಿನ್ ಸಂಖ್ಯೆಯನ್ನು ಯಾರಿಗೂ ಹೇಳಬೇಡಿ ಕಾರ್ಡನ್ನು ಎಟಿಎಮ್‌ನಲ್ಲಿ ಎಂದಿಗೂ ಬಿಡಬೇಡಿ




- ನೀವು ಎಟಿಎಮ್ ನಲ್ಲಿ ಕಾರ್ಡ್ ಸ್ವೈಪ್ಅಥವಾ ಸಂಖ್ಯೆಯನ್ನು ಟೈಪ್ ಮಾಡುವಾಗ ಅಲ್ಲೆಲ್ಲಿಯೂ ಕ್ಯಾಮರಾ ಅಥವಾ ಇತರ ಸಾಧನಗಳು ಇಲ್ಲವೆಂದು ಖಚಿತಪಡಿಸಿಕೊಳ್ಳಿ ಆದಷ್ಟು, ಒಂದು ಕೈಯಿಂದ ಕೀಪ್ಯಾಡ್ ನ್ನು ಮುಚ್ಚಿ ಇನ್ನೊಂದು ಕೈಯಿಂದ ಸಂಖ್ಯೆಯನ್ನು ಟೈಪು ಮಾಡಿರಿ ಸಂಖ್ಯೆಯನ್ನು ಟೈಪು ಮಾಡುವಾಗ ಯಾರೂ ಅದನ್ನು ತಿಳಿಯದಂತೆ ಜಾಗರೂಕರಾಗಿರಿ
- ಹೊರಬಂದ ನೋಟುಗಳನ್ನು ಮರೆಯದೆ ಎಣಿಸಿ ಪರೀಕ್ಷಿಸಿರಿ





- ಎಟಿಎಮ್ ವ್ಯವಹಾರಗಳ ಬಗ್ಗೆ ಎಚ್ಚರಿಕೆಗಳನ್ನು ಪಡೆಯಲು ಕಾರ್ಡ್ ನೀಡಿದ ಬ್ಯಾಂಕಿನಲ್ಲಿ ನಿಮ್ಮ ಮೊಬೈಲ್ ಸಂಖ್ಯೆಯನ್ನು ರಿಜಿಸ್ಟರ್ ಮಾಡಿಕೊಳ್ಳಿ
- ಕಾರ್ಡು ಕಳೆದು ಹೋದರೆ ಅಥವಾ ಅದನ್ನು ನಿಮಗೆ ಗೊತ್ತಿಲ್ಲದೆ ಬೇರಾರೋ ಉಪಯೋಗಿಸುತ್ತಿದ್ದಾರೆ ಎಂಬ ಭಾವನೆ ನಿಮಗೆ ಬಂದರೆ ತಕ್ಷಣ ನಿಮ್ಮ ಬ್ಯಾಂಕನ್ನು ಸಂಪರ್ಕಿಸಿ
- ಎಟಿಎಮ್ ವಿಷಯವಾಗಿ ನಿಮಗೇನಾದರೂ ದೂರುಗಳಿದ್ದರೆ, ಕಾರ್ಡನ್ನು ನೀಡಿದ ಬ್ಯಾಂಕಿಗೆ ಬರೆಯಿರಿ. ಬ್ಯಾಂಕು ನಿಮ್ಮ ದೂರನ್ನು ತಲುಪಿದ 7 ದಿನಗಳಲ್ಲಿ ಪರಿಹರಿಸಬೇಕು ಇಲ್ಲವೇ ನಿಮಗೆ ದಿನಂಪ್ರತಿ ನೂರು ರೂಪಾಯಿಗಳಂತೆ ಪರಿಹಾರ ಕೊಡಬೇಕು( ದೂರನ್ನು ಕಾರ್ಡ್ ವ್ಯವಹಾರದ 30 ದಿನಗಳಲ್ಲಿ ದಾಖಲಿಸಿರಬೇಕು)
- ನಿಮ್ಮ ಎಟಿಎಮ್ ಕಾರ್ಡಿನ ಪಿನ್ ಸಂಖ್ಯೆಯನ್ನು ಅಗಾಗ್ಗೆ ಬದಲಾಯಿಸುತ್ತಿರಿ
- ಕಾರ್ಡ್ ಉಪಯೋಗಿಸುವ ಮುನ್ನ ಎಟಿಎಮ್ ಕೋಣೆ ಅಥವಾ ಎಟಿಎಮ್ ಮಶಿನ್ನಿನಲ್ಲಿ ಅನುಮಾನಾಸ್ಪದ ವಸ್ತು ಅಥವಾ ಚಟುವಟಿಕೆ ಇದೆಯೇ ಎಂದು ಪರಿಶೀಲಿಸಿ



# ಕಲಿಕೆ 10

# ನೀವು ಕಷ್ಟ ಪಟ್ಟು ಗಳಿಸಿದ ಹಣವನ್ನು ನೋಂದಾಯಿತ ಸಂಸ್ಥೆಗಳಲ್ಲಿಯೇ ಹೂಡಿರಿ

- ಬ್ಯಾಂಕಿಂಗ್ ಮತ್ತು ಹಣಕಾಸು ಕ್ಷೇತ್ರದ ನಿಯಂತ್ರಕರಾದ ರಿಜರ್ವ್ ಬ್ಯಾಂಕ್, ಎಸ್.ಇ.ಬಿ.ಐ, ಐ.ಆರ್.ಡಿ.ಎ. ಪಿ.ಎಫ್.ಆರ್.ಡಿ.ಎ ಅಥವಾ ಇತರ ರಾಜ್ಯ ಸರಕಾರದಿಂದ ನಿಯಂತ್ರಿಸಲ್ಪಟ್ಟ ಸಂಸ್ಥೆಗಳಲ್ಲಿಯೇ ಹೂಡಿಕೆ ಮಾಡಿ. ನೀವು ಕಷ್ಟ ಪಟ್ಟು ಗಳಿಸಿದ ಹಣವನ್ನು ಕಾಪಾಡಿಕೊಳ್ಳಿ. ಇಂಥ ನೋಂದಾಯಿತ ಸಂಸ್ಥೆಗಳ ಪಟ್ಟಿಯನ್ನು www.sachet.rbi.org.in ನಲ್ಲಿ ನೋಡಬಹುದು.
- ಅಲ್ಪ ಅವಧಿಯಲ್ಲಿ ಹೆಚ್ಚಿನ ಅಥವಾ ನಿರ್ದಿಷ್ಟ ಲಾಭದ ಆಮಿಷದ ಯೋಜನೆಗಳಿಂದ ದೂರವಿರಿ. ಇವು ಮೋಸದಿಂದ ಕೂಡಿರಬಹುದು ಮತ್ತು ಪ್ರವರ್ತಕರು ನೀವು ಕಷ್ಟ ಪಟ್ಟು ಗಳಿಸಿದ ಹಣವನ್ನು ಎತ್ತಿಕೊಂಡು ಮಾಯವಾಗಿಬಿಡಬಹುದು.
- ಕಮರ್ಶಿಯಲ್ ಬ್ಯಾಂಕುಗಳಿಗಿಂತ ಕಡಿಮೆ ಬಡ್ಡಿದರದಲ್ಲಿ ಸಾಲ ಕೊಡುತ್ತೇವೆನ್ನುವ ಸಂಸ್ಥೆಗಳು ನಿಮ್ಮಿಂದ ಪ್ರೊಸೆಸಿಂಗ್ ಶುಲ್ಕವನ್ನು ಸಂಗ್ರಹಿಸಿ ಓಡಿಹೋಗಿಬಿಡಬಹುದು/ ಮಾಯವಾಗಿಬಿಡಬಹುದು.
- ಯಾವುದೇ ಅನಧಿಕೃತ ಸಂಸ್ಥೆಯು ಹಣ ಮರುಪಾವತಿ ಅಥವಾ ಯಾವುದೇ ಯೋಜನೆಯ ಹೆಸರಿನಲ್ಲಿ ಹಣವನ್ನು ಸಂಗ್ರಹಿಸಿದ್ದರ ಬಗ್ಗೆ ನಿಮಗೆ ಮಾಹಿತಿ ಇದ್ದರೆ, www.sachet.rbi.org.in ವೆಬ್ ಸೈಟಿಗೆ ಹೋಗಿ ಅಲ್ಲಿ ಅದನ್ನು ದಾಖಲಿಸಿ.








# ಕಲಿಕೆ 11

## ಬಲವಂತದ ಮಾರಾಟ – ಹಣ ಕಟ್ಟಲೆಂದು ಬ್ಯಾಂಕಿಗೆ ಹೋದಾಗ, ನಿಮಗರ್ಥವಾಗದಿರುವ ವಿಮಾ ಪಾಲಿಸಿಯನ್ನು ಮಾರಿದರೆ, ಅದು  ತಪ್ಪು

- ಯಾವಾಗಲಾದರೂ ನೀವು ಬ್ಯಾಂಕಿಗೆ ಹಣವನ್ನುಅವಧಿ ಠೇವಣಿಯಲ್ಲಿಡಲು ಹೋಗಿದ್ದಾಗ ಅವರು ನಿಮಗೆ ಒಂದು ವಿಮಾ ಪಾಲಿಸಿಯನ್ನು ತೆಗೆದುಕೊಳ್ಳಲು ಹೇಳಿರುವರೇ?
- ನಿಮಗೆ ಅವಶ್ಯಕತೆಯಿದ್ದರೆ ಮಾತ್ರ ವಿಮಾ ಪಾಲಿಸಿಯನ್ನು ಕೊಳ್ಳಿರಿ. ನಿಮಗೆ ಬೇಡವಾದರೆ, ಬ್ಯಾಂಕು ನಿಮ್ಮನ್ನು ಬಲವಂತ ಮಾಡಲು ಸಾಧ್ಯವಿಲ್ಲ ಎಂಬುದನ್ನು ನೆನಪಿಡಿ.
- ಎಲ್ಲಿಯೂ ಸಹಿ ಮಾಡುವ ಮೊದಲು ಸ್ವಲ್ಪ ಸಮಯ ಮಾಡಿಕೊಂಡು ಅದೇನೆಂದು ಓದಿಕೊಳ್ಳಿ
- ನೀವು ಕೇಳದೆಯೇ, ಬ್ಯಾಂಕು ನಿಮಗೆ ಒಂದು ಉತ್ಪನ್ನವನ್ನು ಮಾರಲು ಬಂದರೆ, ನಿಮಗೆ ಅದು ಬೇಕು ಎನಿಸಿದರೆ ಅಥವಾ ಅದರ ಉಪಯುಕ್ತತೆಯ ಬಗ್ಗೆ ನಿಮಗೆ ಖಾತ್ರಿಯಾದರೆ ಮಾತ್ರ ಕೊಂಡುಕೊಳ್ಳಿ
- ನಿಮ್ಮ ಬ್ಯಾಂಕು ನಿಮಗೆ ಬಲವಂತವಾಗಿ ಯಾವೊಂದು ಹಣಕಾಸಿನ ಉತ್ಪನ್ನವನ್ನು ಮಾರಿದೆಯೆನಿಸಿದರೆ, ಅದರ ಬಗ್ಗೆ ದೂರು ಕೊಡಿ.







भारतीय रिज़र्व बैंक
RESERVE BANK OF INDIA